**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 101/2018**

| | | | |
|---|---|---|---|
| ಹೆಸರು | : | ದೇವಿಂದ್ರಪ್ಪ | ಚಾ.ಸಾ.18 |
| ತಂದೆಯ ಹೆಸರು | : | ನಾಗಪ್ಪ | ಪ್ರಾ.ಸಾ.19 |
| ವಯಸ್ಸು | : | 60 ವರ್ಷ | ದಿನಾಂಕಃ 10-01-2024 |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ರುದ್ರನೂರ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನಗೆ ಗೊತ್ತು. ಪ್ರಾಸಾ-17 ರವರು ನನಗೆ ಗೊತ್ತು. ಪ್ರಾಸಾ-15 ರವರು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ನಿಪಿ-11 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರದಲ್ಲಿ ನನ್ನ ಜೊತೆ ಪ್ರಾಸಾ-17 ರವರು ಇದ್ದಾರೆ. ಸದರಿ ಭಾವಚಿತ್ರವನ್ನು ರುದ್ರನೂರಿನಲ್ಲಿ ಪಡೆದುಕೊಂಡಿದ್ದಾರೆ.

ಈಗ ನೋಡುತ್ತಿರುವ ನಿಪಿ-12 ರಲ್ಲಿರುವ ಹೆಬ್ಬರಳಿನ ಗುರುತು ನನ್ನದೆ. ಈಗ 6-7 ವರ್ಷಗಳ ಹಿಂದೆ ನಾನು ಅಂಗನವಾಡಿಯಲ್ಲಿ ಕುಳಿತಾಗ ಕಬ್ಬಲಿಗೆಯರ ಮನೆ ಹತ್ತಿರ ಕರೆದು ನನ್ನ ಹೆಬ್ಬರಳಿನ ಗುರುತನ್ನು ಪಡೆದುಕೊಂಡಿದ್ದಾರೆ. ಸದರಿ ಮನೆ ನಿಪಿ-11 ರ ಭಾವಚಿತ್ರದಲ್ಲಿದೆ. ಯಾವ ಕಾರಣಕ್ಕಾಗಿ ನನ್ನ ಹೆಬ್ಬರಳಿನ ಗುರುತು ಮತ್ತು ಭಾವಚಿತ್ರವನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕ 13-10-2017 ರಂದು ಬೆಳಗ್ಗೆ 9 ರಿಂದ 10 ಗಂಟೆವರೆಗೆ ಪೋಲಿಸರು ಆರೋಪಿಯ ಮನೆಯ ಮುಂದೆ ನನ್ನ ಹೆಬ್ಬರಳಿನ ಗುರುತನ್ನು ಪಡೆದಿದ್ದಾರೆ ಎಂದರೆ ಸಾಕ್ಷಿ ಅವರು ಹೊಸ ಮನೆಯನ್ನು ಕಟ್ಟಿಸಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ.ಬಿ.ಕೆ. ವಕೀಲರಿಂದಃ- ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**